ಸಾಕ್ಷಿಯನ್ನು ದಿಃ **29.08.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಇ ಎಂ ವಕೀಲರಿಂದಃ-</u>

ನಾನು 4 ನೇ ತರಗತಿ ಓದಿದ್ದೇನೆ. ನಾನು ಮರದ ವ್ಯಾಪಾರ ಮಾಡುತ್ತೇನೆ. ನನಗೆ ವಾರ್ಷಿಕ ರೂ. 10 ಲಕ್ಷ ಆದಾಯ ಇದೆ. ಅದೇ ಆದಾಯದಲ್ಲಿ ನಾನು ಎಲ್ಲಾ ವ್ಯವಹಾರಗಳನ್ನು ಮಾಡಬೇಕೆಂದರೆ ಸರಿ. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. ನಾನು ಏನೇ ವ್ಯವಹಾರ ಮಾಡಿದರು ಆದಾಯ ತೆರಿಗೆ ವ್ಯಾಪ್ತಿಯಲ್ಲಿ ತೋರಿಸಬೇಕು ಎಂದರೆ ಸರಿ. ಸಾಲ ಕೊಡುವುದನ್ನು ಕೂಡ ನಾನು ಆದಾಯ ತೆರಿಗೆಯಲ್ಲಿ ಘೋಷಿಸುತ್ತೇನೆ ಎಂದರೆ ನಾನು ಯಾರಿಗೂ ಸಾಲ ಕೊಟ್ಟಿಲ್ಲ, ಜಮೀನನ್ನು ಮಾರಾಟ ಮಾಡಿ ಬಂದ ಹಣವನ್ನು ಕೊಟ್ಟಿದ್ದೇನೆ. ಸಾಲ ಕೊಡುವುದನ್ನು ಕೂಡ ಆದಾಯ ತೆರಿಗೆಯಲ್ಲಿ ಘೋಷಿಸಬೇಕು ಎಂದರೆ ನಾನು ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ.

ಪ್ರತಿವಾದಿಯರು ನನಗೆ ಕಳೆದ 20 ವರ್ಷಗಳಿಂದ ಪರಿಚಯ. ನಾನು ಲೇವಾದೇವಿ ವ್ಯವಹಾರ ಮಾಡುತ್ತಿಲ್ಲ. 1 ನೇ ಪ್ರತಿವಾದಿ ಹೆಚ್ ಡಿ ಕೋಟೆ ಪಟ್ಟಣದ ವಾಸಿ ಎಂದರೆ ಸರಿ. 1 ನೇ ಪ್ರತಿವಾದಿ ಯಾವುದೇ ವ್ಯವಹಾರ ಮಾಡಿದರೆ ಹೆಚ್ ಡಿ ಕೋಟೆಯಲ್ಲಿಯೇ ಮಾಡುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ನನ್ನ ಮನೆಗೆ ಬಂದು ವ್ಯವಹಾರ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ 10.04.2021 ರಂದು 1 ನೇ ಪ್ರತಿವಾದಿ ನನ್ನ ಮನೆಗೆ ಬಂದು ಸಾಲ ಕೊಡುವ ಬಗ್ಗೆ ಕೇಳಿಕೊಂಡರು. 1 ನೇ ಪ್ರತಿವಾದಿ ಸಾಲ ಕೇಳಲು ಬಂದಾಗ ಅವರ ಮಗನಾದ ಜಯಂತ ಇದ್ದರು ಬೇರೆ ಯಾರು ಇರಲಿಲ್ಲ. ಯಾವೆಲ್ಲಾ ದಾಖಲೆಗಳನ್ನು ನೀವು 1 ನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದೀರಿ ಎಂದರೆ ನಾನು ಯಾವುದೇ ದಾಖಲೆಗಳನ್ನು ಕೇಳಿಲ್ಲ 1 ನೇ ಪ್ರತಿವಾದಿಯೇ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಬಂದರು. 1 ನೇ ಪ್ರತಿವಾದಿ ಮನೆಯ ಕ್ರಯ ಪತ್ರ, ನಮೂನೆ -3, ಕಂದಾಯ ರಶೀದಿಗಳನ್ನು ನನಗೆ ಕೊಟ್ಟಿದ್ದಾರೆ ಹಾಗೂ ಅವರ ಪತ್ನಿಯಾದ 2 ನೇ ಪ್ರತಿವಾದಿಗೆ ಸೇರಿದ ತಲಾ ರೂ. 5 ಲಕ್ಷಗಳ ಬ್ಯಾಂಕ್ ಆಫ್ ಬರೋಡಾದ 2 ಚೆಕ್ ಗಳನ್ನು ಕೊಟ್ಟಿದ್ದಾರೆ ಹಾಗೂ ದಿನಾಂಕ 16.04.2021 ರಂದು On Demand Promissory Note ಬರೆದುಕೊಟ್ಟಿದ್ದಾರೆ. ಮೇಲೆ ಹೇಳಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಬ್ಯಾಂಕ್ ವ್ಯವಹಾರ ನಡೆಸುವುದಿಲ್ಲ. 1 ನೇ ಪ್ರತಿವಾದಿಯಿಂದ ನಾನು 13 ವರ್ಷದ ಇಸಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಅವರು ಕೊಟ್ಟಿದ್ದಾರೆ. ಮೇಲೆ ಹೇಳಿದ ಚೆಕ್ ಮತ್ತು ಡಿಪಿ ನೋಟ್ ನ್ನು ಹೊರತು ಪಡಿಸಿ ಮೇಲೆ ಹೇಳಿದ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಕ್ರಯಪತ್ರ ನನ್ನ ಬಳಿ ಇದೆ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.